# ಪ್ರವಾಸ–ಚಿತ್ರಕಲೆ; ಅನನ್ಯ ಅನುಭವ!



**ಹೆಸರಾಂತ ಚಿತ್ರಕಲಾವಿದ ಬಿ.ಕೆ.ಎಸ್. ವರ್ಮ ಅವರೂ ಸೇರಿದಂತೆ ಅನೇಕ ಆತ್ಮೀಯ ಸ್ನೇಹಿತರ ಜೊತೆಗೆ ಪ್ರವಾಸ ಹೋಗಿದ್ದಷ್ಟೇ ಅಲ್ಲದೆ ಆ ಪ್ರಶಾಂತ ತಾಣದಲ್ಲಿ ವರ್ಮ ಅವರು ಬಿಡಿಸಿದ ಚಿತ್ರ, ಅವರೊಂದಿಗೆ ಒಡನಾಡಿದ ಅನುಭವ ನಿಜಕ್ಕೂ ಅನನ್ಯ.**

**■ ವಿಘ್ನೇಶ್ವರ ಹೇರಳೆ**

ಅದೊಂದು ಪ್ರಶಾಂತವಾದ ಪ್ರಕೃತಿ ಸೌಂದರ್ಯದ ತಾಣ. ಅಲ್ಲಿ ಕಾಲಿಡುತ್ತಿದ್ದಂತೆ ಮನಸ್ಸು ಉಲ್ಲಸಿತವಾಗಿತ್ತು. ಸುತ್ತಲೂ ಮರ ಗಿಡಗಳು, ಮಣ್ಣಿನ ದಿಬ್ಬಗಳು, ಬಂಡೆಗಲ್ಲುಗಳು. ಮಧ್ಯದಲ್ಲೊಂದು, ಬಂಡೆಗಳ ಹಾಸಿನಿಂದ ಕೂಡಿದ ತಗ್ಗಿನ (ಹೊಂಡ) ಜಾಗ. ನಮ್ಮ ಜೊತೆಗಿದ್ದ ಆ ಚಿತ್ರಕಲಾವಿದರಿಗೆ ಎಲ್ಲಿಲ್ಲದ ಸಂಭ್ರಮ! ಬಂಡೆಗಳ ನಡುವೆ ಚಿತ್ರ ಬರೆಯುವ ಕ್ಯಾನ್ವಾಸ್ ಒಂದು ಪ್ರತ್ಯಕ್ಷವಾಗುತ್ತದೆ. ಚಿತ್ರಪರದೆಯ ಮುಂದೆ ಆ ಹೆಸರಾಂತ ಕಲಾವಿದ. ಅವರ ಕೈಯಲ್ಲಿ ಬಣ್ಣ, ಕುಂಚ. ಆ ಕಲಾವಿದರು ಬಣ್ಣದಲ್ಲಿ ಅದ್ದಿದ ಕುಂಚವನ್ನು ಬಿಳಿಯ ಕ್ಯಾನ್ವಾಸ್ ಮೇಲೆ ಅತ್ತಿಂದಿತ್ತ, ಇತ್ತಿಂದತ್ತ ಆಡಿಸುತ್ತಾರೆ. ವಾಹ್! ಹಸಿರು ಪರಿಸರದ ನಡುವೆ ಪ್ರಕೃತಿಯ ಬಣ್ಣಕ್ಕೊಪ್ಪುವಂತಹ ಸುಂದರ ಕಲಾಕೃತಿಯೊಂದು ಅಲ್ಲಿ ಮೂಡುತ್ತದೆ. ಅದನ್ನು ನೋಡುತ್ತ ಸುತ್ತಲೂ ನಿಂತಿದ್ದ ನಾವು ಮೂಕವಿಸ್ಮಿತರಾಗುತ್ತೇವೆ. ಕಲಾವಿದರ ಕಲಾಕೌಶಲ್ಯದ ಬಗ್ಗೆ ಮೆಚ್ಚುನುಡಿಗಳನ್ನಾಡುತ್ತೇವೆ. ಆ ದಿನವನ್ನು ನೆನೆದರೆ ಈಗಲೂ ಸಂತಸವಾಗುತ್ತದೆ. ಅಂದು ನಮ್ಮೆಲ್ಲರನ್ನು ಬೆರಗುಗೊಳಿಸಿದ ಆ ಕಲಾವಿದರೇ ಅಂತರರಾಷ್ಟ್ರೀಯ ಖ್ಯಾತಿಯ ಚಿತ್ರಕಲಾವಿದ ಬಿ. ಕೆ. ಶ್ರೀನಿವಾಸ ವರ್ಮ.

ಇದು ನಡೆದದ್ದು ಸುಮಾರು ಮೂರು ದಶಕಗಳ ಹಿಂದೆ ಏರ್ಪಡಿಸಿದ್ದ ಪ್ರವಾಸ ಕಾರ್ಯಕ್ರಮವೊಂದರಲ್ಲಿ. ವಿವಿಧ ಕಲಾಪ್ರಕಾರಗಳಲ್ಲಿ ತೊಡಗಿಕೊಂಡಿದ್ದ ಸಮಾನಮನಸ್ಕ ಮಿತ್ರರಾದ ಸಾಹಿತಿಚುಕ್ಕಿಚಿತ್ರ ಕಲಾವಿದ ಮೋಹನ್ ವೆರ್ಣೇಕರ್, ಚಿತ್ರ ಕಲಾವಿದ ಬಿ.ಕೆ. ಶ್ರೀನಿವಾಸ ವರ್ಮ, ಬೆಂಗಳೂರು ಇತಿಹಾಸ ಸಂಶೋಧಕಲೇಖಕ ಸುರೇಶ ಮೂನ, ಲೇಖಕ ಮುಕುಂದ ಪುರೋಹಿತ್, ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಸಾಹಿತಿ ನೀಲಾವರ ಸುರೇಂದ್ರ ಅಡಿಗ, ವ್ಯಂಗ್ಯಚಿತ್ರಕಾರ ಸು.ವಿ. ಮೂರ್ತಿ, ಚಿತ್ರನಾಟಕ ಕಲಾವಿದೆ ಉಮಾ ಗಂಜಾಂ, ಲಘುಸಂಗೀತಗಾರನಾಟಕಕಾರ ಹಿರಿಯೂರು ಸತ್ಯನಾರಾಯಣ, ಹವ್ಯಾಸಿ ಲೇಖಕನಾಗಿರುವ ನಾನು ಹಾಗೂ ಸಾಹಿತ್ಯಾಸಕ್ತಅಧ್ಯಾಪಕ ಜಿ.ವಿ. ಸಂಪತ್‌ಕುಮಾರ್, ಸಾಹಿತ್ಯಪ್ರೇಮಿ ಕೃಷ್ಣಮೂರ್ತಿ ಹೇರಳೆ ಮತ್ತಿತರ ಆಸಕ್ತರು ಅಂದು ಸೇರಿದ್ದೆವು. ಕಲಾಸಕ್ತರಾಗಿದ್ದ ಬಿ.ನರಸಮ್ಮ ಅವರು ನಮ್ಮ ಬಳಗದ ಮೇಲಿನ ಪ್ರೀತಿವಿಶ್ವಾಸ, ಅಭಿಮಾನದಿಂದ ನಮ್ಮನ್ನೆಲ್ಲ ಪ್ರವಾಸಕ್ಕೆ ಕರೆದೊಯ್ದಿದ್ದರು.

ನಮ್ಮ ಅಂದಿನ ಕಾರ್ಯಕ್ರಮವೇ ಬೆಂಗಳೂರಿನ ವಸಂತಪುರದ ವಸಂತವಲ್ಲಭರಾಯ ದೇವಸ್ಥಾನಕ್ಕೆ ಒಂದು ದಿನದ ಪ್ರವಾಸವಾಗಿತ್ತು. ವಸಂತಪುರಕ್ಕೆ ಪ್ರವಾಸವೇ? ಎಂದು ಈಗಿನವರಿಗೆ ಅನ್ನಿಸೀತು. ಸುಮಾರು ಮೂವತ್ತು ವರ್ಷಗಳ ಹಿಂದೆ ವಸಂತಪುರ ಈಗಿನಂತೆ ಬಡಾವಣೆಗಳಾಗಿ ಮಾರ್ಪಟ್ಟಿರಲಿಲ್ಲ. ಆ ಪ್ರದೇಶದಲ್ಲಿ ಎಲ್ಲೆಲ್ಲೂ ಹಸಿರು ಕಂಗೊಳಿಸುತ್ತಿತ್ತು. ಅದು ಬೆಂಗಳೂರಿನ ಹೊರವಲಯದಂತೆಯೇ ಇತ್ತು. ಸಾರಿಗೆ ಸಂಪರ್ಕದ ವ್ಯವಸ್ಥೆಗಳೂ ಈಗಿನಷ್ಟು ಇರಲಿಲ್ಲ. ಹಾಗಾಗಿ ಅಲ್ಲಿಗೆ ಹೋಗಿ ಬರುವುದೆಂದರೆ ಅದೊಂದು ಪ್ರವಾಸವೇ ಅನಿಸುತ್ತಿತ್ತು.

ನಿಗದಿಯಂತೆ ಒಂದೆಡೆ ಸೇರಿ ವೈಕುಂಠ ಕ್ಷೇತ್ರವೆಂದೇ ಹೆಸರಾಗಿದ್ದ ವಸಂತಪುರಕ್ಕೆ ಬಸ್ಸಿನಲ್ಲಿ ಪ್ರಯಾಣಿಸಿದೆವು. ಅಲ್ಲಿ ಶ್ರೀ ವಸಂತವಲ್ಲಭರಾಯಸ್ವಾಮಿ (ವೆಂಕಟೇಶ್ವರ) ದರ್ಶನ, ಪೂಜೆ, ಪ್ರಸಾದ, ತಿಂಡಿಊಟ ಎಲ್ಲವೂ ನಡೆದವು. ಇವೆಲ್ಲವುಗಳ ನಡುವೆ ಆ ಪ್ರದೇಶದ ಸುತ್ತಮುತ್ತ ಸುತ್ತಾಡಿದೆವು. ಸನಿಹದಲ್ಲೇ ಇದ್ದ ಗುಡ್ಡದ ಮೇಲಿನ ಗುಹೆಯ ದ್ವಾರದ ಬಳಿ ಅಡ್ಡಾಡಿದೆವು. ಬಿ.ಕೆ.ಎಸ್. ವರ್ಮ ಅಲ್ಲಿಯೇ ಚಿತ್ರವೊಂದನ್ನು ಬರೆಯಲು ಶುರುವಿಟ್ಟುಕೊಂಡಿದ್ದರು. ಯಾವುದೇ ದೊಡ್ಡ ಅಲಂಕೃತ ವೇದಿಕೆಯ ಹಂಗಿಲ್ಲದೆ ಪ್ರಕೃತಿಯನ್ನೇ ವೇದಿಕೆಯನ್ನಾಗಿಸಿಕೊಂಡು, ಬಂಡೆಯ ಮೇಲೆಯೇ ಕ್ಯಾನ್ವಾಸ್‌ನ್ನು ಇರಿಸಿ, ಚಿತ್ರಕಲಾಕೃತಿಯೊಂದನ್ನು ರಚಿಸಿದ್ದರು.

ಅಂದಿನ ಆ ಸಂದರ್ಭವನ್ನು ನಾನೇ ಕ್ಯಾಮೆರಾದಲ್ಲಿ ಸೆರೆಹಿಡಿದದ್ದು, ಅಲ್ಲಿನ ಬಂಡೆಯೊಂದರ ಮೇಲೆ ಅವರೊಂದಿಗೆ ಕುಳಿತು ಛಾಯಾಚಿತ್ರ ತೆಗೆಸಿಕೊಂಡು ಪುಳಕಗೊಂಡಿದ್ದು ಎಲ್ಲವೂ ನನ್ನ ನೆನಪಿನ ಬುತ್ತಿಯಲ್ಲಿ ಸೇರಿಹೋಗಿದೆ. ■